ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೊವ್



14



ಡನ್ನೋನ ಪಟ್ಟಣದ ಸುತ್ತ ತಿರುಗಾಟ



ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೊವ್

14

ಡನ್ನೋನ ಪಟ್ಟಣದ ಸುತ್ತ ತಿರುಗಾಟ

ಚಿತ್ರಗಳು: ಬೋರಿಸ್ ಕಲೌಶಿನ್

ಕನ್ನಡಕ್ಕೆ ಪ್ರಭಾಕರ ನಾನಾವಟಿ







ಸ್ನೋಡ್ರಾಪ್, ಕಾರ್ನ್‌ಫ್ಲವರ್ ಮತ್ತು ಡನ್ನೋ ತೆಳುವಾದ ವಿಲೋ ಗಿಡದ ಟೊಂಗೆಗಳಿಂದ ಮಾಡಿದ ಬೇಲಿಗಳಿಂದ ಸುತ್ತುವರಿದಿದ್ದ ಒಂದು ಬೀದಿಗೆ ಬಂದು ಮುಟ್ಟಿದರು. ಬೇಲಿಗಳ ಹಿಂದೆ ಕೆಂಪು ಮತ್ತು ಹಸಿರು ಮಾಳಿಗೆಗಳಿದ್ದ ಸುಂದರ ಮನೆಗಳು ಕಾಣಿಸುತ್ತಿದ್ದವು. ಮನೆಗಳ ಮೇಲೆ ಸೇಬು, ಪಿಯರ್ ಮತ್ತು ಪ್ಲಮ್ ಗಿಡಗಳು ಎತ್ತರವಾಗಿ ಚಾಚಿಕೊಂಡಿದ್ದವು. ಗಿಡಗಳು ತೋಟಗಳಲ್ಲಿ ಮಾತ್ರವಲ್ಲದೆ ಬೀದಿಗಳಲ್ಲಿಯೂ ಬೆಳೆದಿದ್ದವು. ಅಲ್ಲಿ ಎಷ್ಟೊಂದು ಗಿಡಗಳು ಮತ್ತು ಪೊದೆಗಳಿದ್ದವೆಂದರೆ ಆ ಪಟ್ಟಣವನ್ನು 'ಗ್ರೀನ್‌ವಿಲ್' ಎಂದು ಕರೆಯಲಾಗುತ್ತಿತ್ತು.

ಡನ್ನೋ ಕುತೂಹಲದಿಂದ ತನ್ನ ಸುತ್ತಲೂ ನೋಡಿದನು. ಎಲ್ಲವೂ ಕಲಂಕರಹಿತವಾಗಿ ಸ್ವಚ್ಛವಾಗಿದ್ದವು. ಪ್ರತಿಯೊಂದು ತೋಟದಲ್ಲಿಯೂ ಮೈಟ್ಸ ಹುಡುಗಿಯರು ಕೆಲಸ ಮಾಡುತ್ತಿರುವುದು ಕಾಣಿಸುತ್ತಿತ್ತು.

ಅವರಲ್ಲಿ ಕೆಲವರು ಹುಲ್ಲು ಕತ್ತರಿಸುತ್ತಿದ್ದರು, ಇನ್ನು ಕೆಲವರು ದಾರಿಗಳನ್ನು ಗುಡಿಸುತ್ತಿದ್ದರು, ಮತ್ತಿತರರು ಕಾರ್ಪೆಟ್‌ನಿಂದ ಮಾಡಲ್ಪಟ್ಟ ಉದ್ದನೆಯ ಹಾಸಿಗೆ ಪಟ್ಟಿಗಳಿಂದ ಧೂಳನ್ನು ಬಡಿಯುತ್ತಿದ್ದರು. ಈ ಕಾರ್ಪೆಟ್ ಪಟ್ಟಿಗಳನ್ನು ಗ್ರೀನ್‌ವಿಲ್ ಟೌನದ ಮನೆಗಳ ನೆಲಗಳ ಮೇಲಷ್ಟೇ ಅಲ್ಲದೆ, ಪಾದಚಾರಿ ದಾರಿಗಳ ಮತ್ತು ಬೀದಿಗಳ ಮೇಲೂ ಹಾಸಲಾಗಿತ್ತು.


ಕೆಲ ಮೈಟ್ಸ ಹುಡುಗಿಯರು ದಾರಿಹೋಕರು ತಮ್ಮ ಕಾರ್ಪೆಟ್ಟಗಳನ್ನು ಹೊಲಸು ಮಾಡಬಹುದೆಂದು ಹೆದರಿ, ಅವರು ಬೇಲಿಗಳ ಬಳಿ ನಿಂತು ಅವುಗಳ ಮೇಲೆ ನಡೆಯಬಾರದೆಂದು, ಅಥವಾ ನಡೆದರೆ ಮೊದಲು ತಮ್ಮ ಕಾಲುಗಳನ್ನು ಚೆನ್ನಾಗಿ ಒರೆಸಿಕೊಳ್ಳಬೇಕೆಂದು ವಿನಂತಿಸುತ್ತಿದ್ದರು. ಅನೇಕ ಮುಂಭಾಗದ ತೋಟಗಳಲ್ಲಿ ದಾರಿಗಳ ಮೇಲೆ ಕಾಲೊರೆಸುವ ಹಾಸುಗಳನ್ನು ಹಾಸಲಾಗಿತ್ತು, ಮತ್ತು ಮನೆಗಳ ಹೊರಭಾಗಗಳಲ್ಲಿ ಪ್ರಕಾಶಮಾನವಾದ ಹಾಸುಗಳನ್ನು ನೇತುಹಾಕಲಾಗಿತ್ತು.
ಗ್ರೀನ್‌ವಿಲ್‌ನಲ್ಲಿ ನೀರಿನ ಸರಬರಾಜು ಬಿದಿರಿನ ಕೊಳವೆಗಳ ಮೂಲಕ ಮಾಡಲಾಗಿತ್ತು. ಬಿದಿರು ಪೊಳ್ಳಾಗಿರುತ್ತದೆ ಎಂಬುದು ಎಲ್ಲರಿಗೂ ತಿಳಿದೇ ಇದೆ, ಆದ್ದರಿಂದ ಅದು ಕೊಳವೆಗಳಾಗಿ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ. ಅವುಗಳನ್ನು ನೆಲದೊಳಗೆ ಹೂಳಿರಲಿಲ್ಲ; ಅವು ಕೊಳೆಯದಂತೆ ನೆಲದ ಮೇಲ್ಭಾಗದಲ್ಲಿ ಕಂಬಗಳ ಮೇಲೆ ಇಡಲಾಗಿತ್ತು. ಮೈಟ್ಸ ಹುಡುಗಿಯರು ನೀರು ಸೋರಬಾರದೆಂದು ಗಮನ ವಿಡುತ್ತಿದ್ದರು ಮತ್ತು ಅವುಗಳನ್ನು ಜಾಗರೂಕತೆಯಿಂದ ಸರಿಪಡಿಸುತ್ತಿದ್ದರು, ಹೀಗಾಗಿ ಅವು ಬಹಳ ಕಾಲ ಬಾಳುತ್ತಿದ್ದವು. ಮುಖ್ಯ ನೀರಿನ ಕೊಳವೆಯಿಂದ ಪ್ರತಿ ಮನೆಗೂ ಒಂದು ನಲ್ಲಿ ಹೋಗುತ್ತಿತ್ತು. ಇದಲ್ಲದೆ, ಪ್ರತಿ ಮನೆಯ ಮುಂಭಾಗದಲ್ಲೂ ಒಂದು ಕಾರಂಜಿ ಇತ್ತು. ಇದು ಸುಂದರವಾಗಿರುವುದರ ಜೊತೆಗೆ ಉಪಯುಕ್ತವೂ ಆಗಿತ್ತು, ಏಕೆಂದರೆ ಕಾರಂಜಿಯಿಂದ ಹರಿದುಬರುವ ನೀರನ್ನು ತೋಟಗಳಿಗೆ ನೀರು ಉಣಿಸಲು ಬಳಸಲಾಗುತ್ತಿತ್ತು. ಪ್ರತಿಯೊಂದು ಮನೆಯ ಮುಂದೆ ಬೀಟ ರೂಟ್, ಕ್ಯಾರೆಟ್, ಮೂಲಂಗಿ ಮತ್ತು ಇತರ ತರಕಾರಿಗಳು ಬೆಳೆಯುತ್ತಿದ್ದ ಒಂದು ಚಿಕ್ಕ ತೋಟವಿತ್ತು.
ಕೆಲವು ಮೈಟ್ಸ ಹುಡುಗಿಯರು ತೋಟವೊಂದರಲ್ಲಿ ತರಕಾರಿಗಳನ್ನು ಕೀಳುತ್ತಿರುವುದನ್ನು ಡನ್ನೋ ನೋಡಿದನು. ಮೊದಲು ಅವರು ಕ್ಯಾರೆಟ್‌ನ ಸುತ್ತಲಿನ ಮಣ್ಣನ್ನು ಅಗೆದು ತೆಗೆದುಹಾಕುತ್ತಿದ್ದರು, ನಂತರ ಅದರ ಮೇಲ್ಭಾಗಕ್ಕೆ ಒಂದು ಹಗ್ಗವನ್ನು ಕಟ್ಟಿ ತಮ್ಮ ಸಂಪೂರ್ಣ ಶಕ್ತಿಯಿಂದ ಎಳೆಯುತ್ತಿದ್ದರು. ಕ್ಯಾರೆಟ್ ಬೇರುಸಹಿತ ಹೊರಬಂದಾಗ, ಮೈಟ್ಸ ಹುಡುಗಿಯರು ಜೋರಾಗಿ ಕೂಗುತ್ತಾ ನಗುತ್ತಾ ಅದನ್ನು ಮನೆಗೆ ಎಳೆದುಕೊಂಡು ಹೋಗುತ್ತಿದ್ದರು.
“ನಿಮ್ಮ ಪಟ್ಟಣದಲ್ಲಿ ನನಗೆ ಮೈಟ್ಸ ಹುಡುಗಿಯರೇ ಕಾಣಿಸುತ್ತಿರುವುದೇಕೆ? ಇಲ್ಲಿ ಹುಡುಗರೇ ಇಲ್ಲವೇ?” ಎಂದು ಡನ್ನೋ ಕೇಳಿದನು.
“ಇಲ್ಲ, ಇಲ್ಲ. ಎಲ್ಲ ಮೈಟ್ಸಹುಡುಗರು ನದಿಯ ದಡದಲ್ಲಿ ವಾಸಿಸಲು ಹೋಗಿದ್ದಾರೆ. ಅವರು 'ಕೈಟ ಟೌನ' ಎಂದು ಕರೆಯಲ್ಪಡುವ ತಮ್ಮದೇ ಆದ ಪಟ್ಟಣವನ್ನು ಕಟ್ಟಿಕೊಂಡಿದ್ದಾರೆ.”




"ಅವರು ಹಾಗೇಕೆ ಮಾಡಿದರು?" ಎಂದು ಡನ್ನೋ ಕೇಳಿದನು.
"ಅವರಿಗೆ ಅಲ್ಲಿ ಇರುವದು ಹೆಚ್ಚು ಇಷ್ಟ. ಬೇಸಿಗೆಯಲ್ಲಿ ಅವರು ಇಡೀ ದಿನ ಬಿಸಿಲಿನಲ್ಲಿ ಮಲಗಿ ಈಜುತ್ತಿರುತ್ತಾರೆ, ಚಳಿಗಾಲದಲ್ಲಿ ಹಿಮದ ಮೇಲೆ ಸ್ಕೇಟಿಂಗ್ ಮಾಡುತ್ತಾರೆ. ವಸಂತಕಾಲದಲ್ಲಿ ನದಿ ತುಂಬಿ ಅವರ ಪಟ್ಟಣದಲ್ಲಿ ನೀರು ಬಂದಾಗ ಅವರು ತುಂಬಾ ಮೋಜು ಮಾಡುತ್ತಾರೆ.'
"ಅದರಲ್ಲಿ ಅವರಿಗೆ ಏನು ಮೋಜು ಸಿಗುತ್ತದೆ?" ಎಂದು ಆಶ್ಚರ್ಯಗೊಂಡ ಡನ್ನೋ ಕೇಳಿದನು.
"ನನಗೆ ಗೊತ್ತಿಲ್ಲ," ಸ್ನೋಡ್ರಾಪ್ ಎಂದಳು "ಆದರೆ ನಮ್ಮ ಮೈಟ್ಸ ಹುಡುಗರಿಗೆ ಅದು ಇಷ್ಟ. ಅವರು ದೋಣಿಗಳಲ್ಲಿ ಸುತ್ತಾಡುತ್ತಾ ಒಬ್ಬರನ್ನೊಬ್ಬರು ರಕ್ಷಿಸುತ್ತಾರೆ. ಅವರಿಗೆ ಸಾಹಸಗಳೆಂದರೆ ತುಂಬಾ ಇಷ್ಟ.'
"ನನಗೂ ಹಾಗೆಯೇ," ಎಂದ ಡನ್ನೋ. 'ನಾನು ಮೈಟ್ಸ ಹುಡುಗರ ಪರಿಚಯ ಮಾಡಿಕೊಳ್ಳಬಹುದೇನೋ?"
"ಇಲ್ಲ, ನಿನಗೆ ಸಾಧ್ಯವಿಲ್ಲ," ಎಂದ ಸ್ನೋಡ್ರಾಪ್. 'ಮೊದಲನೆಯದಾಗಿ, ಕೈಟ್ ಟೌನ್‌ಗೆ ತಲುಪಲು ಒಂದು ಇಡೀ ಗಂಟೆ ಬೇಕಾಗುತ್ತದೆ; ಎರಡನೆಯದಾಗಿ, ನಮ್ಮ ಮೈಟ್ಸ ಹುಡುಗರು ನಿನ್ನ ತಲೆಯಲ್ಲಿ ಕೆಟ್ಟ ಆಲೋಚನೆಗಳನ್ನು ತುಂಬುತ್ತಾರೆ; ಮತ್ತು ಮೂರನೆಯದಾಗಿ, ನಮ್ಮದು ಅವರೊಂದಿಗೆ ಮಾತುಕತೆ ಇಲ್ಲ.'
"ಅದೇಕೆ?"
"ಅದಕ್ಕೆ ಬಹಳ ಒಳ್ಳೆಯ ಕಾರಣವಿದೆ," ಎಂದ ಕಾರ್ನ್‌ಫ್ಲವರ್. 'ಕಳೆದ ಚಳಿಗಾಲದಲ್ಲಿ ಅವರು ನಮ್ಮನ್ನು ಹೊಸ ವರ್ಷದ ಪಾರ್ಟಿಗೆ ಆಹ್ವಾನಿಸಿದರು, ಅಲ್ಲಿ ಸಂಗೀತ ಮತ್ತು ನೃತ್ಯ ಇರುತ್ತದೆ ಎಂದು ಹೇಳಿದರು, ಮತ್ತು ನಾವು ಅಲ್ಲಿಗೆ ಹೋದಾಗ, ಅವರು ಏನು ಮಾಡಿದರು ಗೊತ್ತೇ? ನಮ್ಮ ಮೇಲೆ ಹಿಮದ ಉಂಡೆಗಳನ್ನು ಎಸೆದರು!"
"ಅದರಿಂದ ಏನು?" ಎಂದ ಡನ್ನೋ.
"ಅದರಿಂದ ಏನು? ಅಂದಿನಿಂದ ನಾವು ಅವರೊಂದಿಗೆ ಮಾತೇ ಆಡಿಲ್ಲ. ನಮ್ಮಲ್ಲಿ ಯಾರೂ ಅವರನ್ನು ನೋಡಲು ಹೋಗುವುದಿಲ್ಲ."
"ಮತ್ತು ಅವರು ನಿಮ್ಮನ್ನು ನೋಡಲು ಬರುವುದಿಲ್ಲವೇ?"
"ಇಲ್ಲ, ಬರುವುದಿಲ್ಲ. ಮೊದಮೊದಲು ಅವರಲ್ಲಿ ಕೆಲವರು ಪ್ರಯತ್ನಿಸಿದರು, ಆದರೆ ಅವರೊಂದಿಗೆ ಆಟವಾಡಲು ಯಾವ ಮೈಟ್ಸ ಹುಡುಗಿಯೂ ಒಪ್ಪಲಿಲ್ಲ. ನಾವು ಅವರನ್ನು ಎಷ್ಟು ಸಂಪೂರ್ಣವಾಗಿ ಕಡೆಗಣಿಸಿದ್ದೆವೆಂದರೆ, ಅವರು ಕೀಟಲೆ ಮಾಡಲು ಪ್ರಾರಂಭಿಸಿದರು — "ಕಿಟಕಿಗಳನ್ನು ಒಡೆಯುವದು, ಬೇಲಿಗಳನ್ನು ಕಿತ್ತುಹಾಕುವುದು, ಮುಂತಾದವು" ಎಂದು ಸ್ನೋಡ್ರಾಪ್ ಹೇಳಿದಳು.

"ಆಮೇಲೆ ಅವರು ನೇಲ್ಸ್ ಎಂಬ ಹೆಸರಿನ ಒಬ್ಬ ತುಂಟ ಹುಡುಗನನ್ನು ನಮ್ಮ ಪಟ್ಟಣಕ್ಕೆ ಕಳುಹಿಸಿದರು," ಎಂದು ಕಾರ್ನ್‌ಫ್ಲವರ್ ಹೇಳಿದಳು. "ಅದು ಏನೋ ಒಂದು!"

"ಹಾಗೆ ಆಗಲಿಲ್ಲ!" ಎಂದು ಸ್ನೋಡ್ರಾಪ್ ಮಧ್ಯೆ ಮಾತು ಸೇರಿಸಿದಳು. ಅವನು ಬಂದು, "ಹುಡುಗರೂ ತನಗೆ ಇಷ್ಟವಿಲ್ಲ, ಅವರೂ ತುಂಬಾ ತುಂಟರು, ಆದ್ದರಿಂದ ನಿಮ್ಮೊಂದಿಗೆ ಸ್ನೇಹ ಬೆಳೆಸಿಕೊಳ್ಳಲು ಬಯಸುತ್ತೇನೆ. "ಎಂದು ಹೇಳಿದನು. ನಾವು ಅವನಿಗೆ ನಮ್ಮ ಪಟ್ಟಣದಲ್ಲಿ ವಾಸಿಸಲು ಅನುಮತಿ ಕೊಟ್ಟೆವು. ಅವನು ಏನು ಮಾಡಿದನೆಂದು ನೀನು ಊಹಿಸಬಲ್ಲೆಯಾ? ರಾತ್ರಿ ಕಿಟಕಿಯಿಂದ ಹೊರಗೆ ಹತ್ತಿ ಹೋಗಿ, ಒಂದು ಮನೆಯ ಬಾಗಿಲಿಗೆ ಕಂಬವನ್ನು ಅಡ್ಡವಾಗಿಟ್ಟನು, ಹಾಗಾಗಿ ಬೆಳಿಗ್ಗೆ ಯಾರಿಗೂ ಹೊರಗೆ ಬರಲು ಆಗಲಿಲ್ಲ. ಮತ್ತೊಂದು ಮನೆಯ ಬಾಗಿಲಿನ ಮೇಲೆ ಒಂದು ಕಟ್ಟಿಗೆ ದೊಡ್ಡ ತುಂಡನ್ನು ಜೋತು ಬಿಟ್ಟನು, ಹಾಗಾಗಿ ಯಾರೂ ಬಾಗಿಲ ತೆರೆದರೂ ಅವರ ತಲೆಗೆ ಅದು ಬಡಿಯುತ್ತಿತ್ತು, ಮೂರನೆಯ ಮನೆಯ ಬಾಗಿಲಿನ ಮೆಟ್ಟಿಲಿನ ಅಡ್ಡಲಾಗಿ ಒಂದು ದಪ್ಪ ಹಗ್ಗವನ್ನು ಕಟ್ಟಿದನು, ಇದರಿಂದ ಯಾರು ಹೊರಗೆ ಬಂದರೂ ಎಡವಿ ಕೆಳಗೆ ಬೀಳುತ್ತಿದ್ದರು, ನಾಲ್ಕನೆಯ ಮನೆಯ ಹೊಗೆಚಿಮಣಿಯನ್ನು ತೆಗೆದುಹಾಕಿದನು, ಐದನೆಯ ಮನೆಯ ಕಿಟಕಿಗಳನ್ನು ಒಡೆದನು...."



ಡನ್ನೋ, ಇವೆಲ್ಲವನ್ನೂ ಕೇಳುತ್ತಾ ಹೊಟ್ಟೆ ನೋವಾಗುವಷ್ಟು ನಕ್ಕನು.
"ನಿನಗೆ ಇದು ತಮಾಷೆಯಾಗಿ ಕಾಣುತ್ತದೆ," ಎಂದಳು ಕಾರ್ನ್‌ಫ್ಲವರ್,
"ಆದರೆ ಎಷ್ಟು ಮೈಟ್ಸ್‌ಹುಡುಗಿಯರ ಮೂಗಿನ ಮೇಲೆ ಉಬ್ಬುಗಳಿದ್ದವು
ಎಂಬುದನ್ನು ನೀನು ನೋಡಬೇಕಿತ್ತು! ಒಬ್ಬಳು ತನ್ನ ಹೊಗೆಚಿಮಣಿಯನ್ನು
ಸರಿಪಡಿಸಲು ಮೇಲಕ್ಕೆ ಹತ್ತಿದಾಗ ಮಾಳಿಗೆಯಿಂದ ಕೆಳಬಿದ್ದು, ತನ್ನ ಕಾಲು
ಮುರಿದುಕೊಳ್ಳುವುದನ್ನು ಸ್ವಲ್ಪದರಲ್ಲೇ ತಪ್ಪಿಸಿಕೊಂಡಳು."
'ನಾನು ಆ ಮೈಟ್ಸ್ ಹುಡುಗಿಯರ ಬಗ್ಗೆ ಕೇಳಿ ನಗುತ್ತಿಲ್ಲ," ಎಂದ ಡನ್ನೋ.
'ನಾನು ಆ ನೇಲ್ಸ್ ಎಂಬ ವ್ಯಕ್ತಿಯ ಕಿಡಿಗೇಡಿತನ ಕೇಳಿ ನಗುತ್ತಿದ್ದೇನೆ.'





‘ನೀನು ಅವನನ್ನು ನೋಡಿ ನಗಬಾರದು, ಅವನನ್ನು ಶಿಕ್ಷಿಸಬೇಕು, ಹಾಗಾದರೆ ಅವನು ಮತ್ತೆಂದೂ ಅಂಥ ದುಷ್ಟ ಕೆಲಸಗಳನ್ನು ಮಾಡಲು ಬಯಸುವುದಿಲ್ಲ," ಎಂದು ಸ್ನೋಡ್ರಾಪ್ ಹೇಳಿದಳು.

ಅವರು ರಸ್ತೆಯ ಮಧ್ಯದಲ್ಲಿ ಸೇಬಿನ ಗಿಡದ ಪಕ್ಕದಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಅದರ ಎಲ್ಲ ಕೊಂಬೆಗಳ ತುಂಬ ಹಣ್ಣಾದ ಕೆಂಪು ಸೇಬುಗಳಿಂದ ತುಂಬಿದ್ದವು. ಒಂದು ನಿಚ್ಚಣಿಕೆಯನ್ನು ಅದರ ಮೇಲೆ ಒರಗಿಸಲಾಗಿತ್ತು, ಆದರೆ ಅದು ಟೊಂಗೆಯ ಅರ್ಧದಷ್ಟು ಎತ್ತರದವರೆಗೆ ಮಾತ್ರ ತಲುಪುತ್ತಿತ್ತು. ಹಗ್ಗದ ನಿಚ್ಚಣಿಕೆಗಳು ಮೇಲಿನ ಕೊಂಬೆಗಳಿಂದ ನೇತಾಡುತ್ತಿದ್ದವು. ಇಬ್ಬರು ಮೈಟ್ಸಹುಡುಗಿಯರು ಮರದ ಮೇಲೆ ಇದ್ದರು. ಅವರಲ್ಲಿ ಒಬ್ಬಳು ಒಂದು ಸೇಬಿನ ಟೊಂಗೆಯನ್ನು ಗರಗಸದಿಂದ ಕತ್ತರಿಸುತ್ತಿದ್ದಳು, ಮತ್ತೊಬ್ಬಳು ಅವಳು ಕೆಳಗೆ ಬೀಳದಂತೆ ಅವಳನ್ನು ಹಿಡಿದುಕೊಂಡಿದ್ದಳು.



“ಎಚ್ಚರಿಕೆ,” ಕಾರ್ನ್‌ಫ್ಲವರ್ ಡನ್ನೋಗೆ ಎಚ್ಚರಿಸಿದಳು. “ಒಂದು ಸೇಬು ನಿನ್ನ ತಲೆಯ ಮೇಲೆ ಬಿದ್ದು ನಿನ್ನನ್ನು ಕೊಲ್ಲಬಹುದು.”
“ನನ್ನನ್ನಲ್ಲ!” ಎಂದು ಡನ್ನೋ ಹೆಮ್ಮೆಯಿಂದ ಹೇಳಿದ. “ನನ್ನ ತಲೆಬುರುಡೆ ತುಂಬಾ ಗಟ್ಟಿಯಾಗಿದೆ!”
“ಆ ಮೈಟ್ಸಹುಡುಗರು ತಾವು ಧೈರ್ಯಶಾಲಿಗಳೆಂದು ಭಾವಿಸುತ್ತಾರೆ, ಆದರೆ ನಾವು ಅವರಷ್ಟೇ ಧೈರ್ಯಶಾಲಿಗಳು,” ಎಂದಳು ಸ್ನೋಡ್ರಾಪ್. “ಆ ಇಬ್ಬರು ಮೈಟ್ಸಹುಡುಗಿಯರು ಎಷ್ಟು ಎತ್ತರಕ್ಕೆ ಹತ್ತಿದ್ದಾರೆಂದು ನೋಡು.”
“ಆದರೆ ಮೈಟ್ಸಹುಡುಗಿಯರು ಬಲೂನುಗಳಲ್ಲಿ ಹೋಗುವುದಿಲ್ಲ ಮತ್ತು ಮೋಟಾರು ಕಾರುಗಳಲ್ಲಿ ಸುತ್ತಾಡುವುದಿಲ್ಲ,” ಎಂದ ಡನ್ನೋ.
“ಓಹ್, ಹಾಗೇನಾ?” ಎಂದಳು ಸ್ನೋಡ್ರಾಪ್, “ನಮ್ಮ ಮೈಟ್ಸಹುಡುಗಿಯರಲ್ಲಿ ಹಲವರಿಗೆ ಕಾರು ಓಡಿಸುವುದು ಗೊತ್ತಿದೆ.”
“ಏನು, ನಿಮ್ಮ ಬಳಿ ಕಾರಿದೆಯೇ?”
“ಇದೆ. ಆದರೆ ಈಗ ಅದು ಕೆಟ್ಟುಹೋಗಿದೆ. ಅದನ್ನು ಹೇಗೆ ದುರಸ್ತಿ ಮಾಡಬೇಕೆಂದು ನಮಗೆ ಗೊತ್ತಿಲ್ಲ. ಬಹುಶಃ ನೀನು ನಮಗೆ ಸಹಾಯ ಮಾಡಬಹುದೇ?”
“ಖಂಡಿತವಾಗಿಯೂ ಮಾಡುತ್ತೇನೆ,” ಎಂದ ಡನ್ನೋ. “ನನಗೆ ಕಾರುಗಳ ಬಗ್ಗೆ ಒಂದೆರಡು ವಿಷಯಗಳು ಗೊತ್ತಿವೆ. ಬೆಂಡಮ್ ಮತ್ತು ಟ್ವಿಸ್ಟಮ್ ಆಸ್ಪತ್ರೆಯಿಂದ ಹೊರಬಂದ ತಕ್ಷಣ ನಾನು ಅವರಿಂದ ಅದನ್ನು ನಿಮಗಾಗಿ ದುರಸ್ತಿ ಮಾಡಿಸುತ್ತೇನೆ.”
“ಓಹ್, ಧನ್ಯವಾದಗಳು!” ಎಂದು ಸ್ನೋಡ್ರಾಪ್ ಚಪ್ಪಾಳೆ ತಟ್ಟಿದಳು.
ಈ ಕ್ಷಣದಲ್ಲಿ ಡನ್ನೋನ ಕಣ್ಣುಗಳು ಅವನು ಹಿಂದೆಂದೂ ನೋಡಿರದ ಒಂದು ಅದ್ಭುತ ವಸ್ತುವಿನ ಮೇಲೆ ಬಿದ್ದವು. ರಸ್ತೆಯ ಮಧ್ಯದಲ್ಲಿ ಎರಡು ಅಥವಾ ಮೂರು ಅಂತಸ್ತಿನ ಮನೆಯಷ್ಟು ದೊಡ್ಡದಾದ ಹಸಿರು ಚೆಂಡುಗಳು ಬಿದ್ದಿದ್ದವು.
“ಅವು ಬಲೂನುಗಳೇ?” ಎಂದು ಅವನು ಕೇಳಿದನು.
ಸ್ನೋಡ್ರಾಪ್ ಮತ್ತು ಕಾರ್ನ್‌ಫ್ಲವರ್ ನಗತೊಡಗಿದರು.
“ಅವು ಕಲ್ಲಂಗಡಿಗಳು,” ಎಂದು ಅವರು ಹೇಳಿದರು. “ನೀನು ಹಿಂದೆಂದೂ ಕಲ್ಲಂಗಡಿಯನ್ನು ನೋಡಿಲ್ಲವೇ?”
“ಎಂದಿಗೂ ಇಲ್ಲ,” ಎಂದು ಡನ್ನೋ ಒಪ್ಪಿಕೊಂಡನು. “ನಾನು ಬಂದಿರುವ ಸ್ಥಳದಲ್ಲಿ ಕಲ್ಲಂಗಡಿಗಳು ಬೆಳೆಯುವುದಿಲ್ಲ. ಅವು ಯಾವುದಕ್ಕಾಗಿ?”
“ಕಲ್ಲಂಗಡಿ ಯಾವುದಕ್ಕಾಗಿ ಎಂದು ಗೊತ್ತಿಲ್ಲದ ಮೈಟ್ಸಹುಡುಗ!” ಎಂದು ಸ್ನೋಡ್ರಾಪ್ ನಕ್ಕಳು. “ಇನ್ನೊಂದು ನಿಮಿಷದಲ್ಲಿ ಸೇಬುಗಳು ಮತ್ತು ಪೇರಗಳು ಯಾವುದಕ್ಕಾಗಿ ಎಂದು ನೀನು ನಮ್ಮನ್ನು ಕೇಳುವೆ.”





“ಅಂದರೆ ನೀವು ಅವುಗಳನ್ನು ತಿನ್ನುತ್ತೀರಿ ಎಂದು ಹೇಳ್ತಿದ್ದೀರಾ?” ಎಂದು ಆಶ್ಚರ್ಯಗೊಂಡ ಡನ್ನೋ ಕೇಳಿದನು. “ಅಷ್ಟು ಗಾತ್ರದ ಹಣ್ಣನ್ನು ತಿನ್ನಲು ಒಂದು ವರ್ಷ ಬೇಕಾಗುತ್ತದೆ.”

“ನಾವು ಅವುಗಳನ್ನು ತಿನ್ನುವುದಿಲ್ಲ,” ಎಂದಳು ಕಾರ್ನ್‌ಫ್ಲವರ್. “ಅವುಗಳೊಳಗಿನ ರಸವನ್ನು ಹೊರತೆಗೆಯುತ್ತೇವೆ. ಅದು ಸಿರಪ್‌ನಂತಿರುತ್ತದೆ. ಕಲ್ಲಂಗಡಿಯ ಕೆಳಭಾಗದಲ್ಲಿ ಒಂದು ರಂಧ್ರ ಮಾಡಿದರೆ, ಒಂದು ಕಲ್ಲಂಗಡಿಯಿಂದ ಹಲವಾರು ಬ್ಯಾರೆಲ್‌ಗಳಷ್ಟು ಸಿರಪ್ ಪಡೆಯಬಹುದು.”

“ಅವುಗಳನ್ನು ನೆಟ್ಟು ಬೆಳೆಸುವ ಆಲೋಚನೆ ಯಾರಿಗೆ ಬಂದಿತು?” ಎಂದು ಡನ್ನೋ ಕೇಳಿದನು.

“ಥಿಸಲ್ ಎಂಬ ಬಹಳ ಬುದ್ಧಿವಂತ ಪುಟ್ಟ ಮೈಟ್ಸಹುಡುಗಿಗೆ,” ಎಂದಳು ಕಾರ್ನ್‌ಫ್ಲವರ್. “ಹಣ್ಣುಗಳು ಮತ್ತು ತರಕಾರಿಗಳನ್ನು ಬೆಳೆಸುವುದು ಹಾಗೂ ಹೊಸ ತಳಿಗಳನ್ನು ಪಡೆಯುವುದೆಂದರೆ ಅವಳಿಗೆ ತುಂಬಾ ಇಷ್ಟ. ನಮ್ಮಲ್ಲಿ ಹಿಂದೆಂದೂ ಕಲ್ಲಂಗಡಿಗಳು ಇರಲಿಲ್ಲ, ಆದರೆ ಒಂದು ದಿನ ಯಾರೋ ಕಾಡಿನಲ್ಲಿ ಕಾಡು ಕಲ್ಲಂಗಡಿಗಳು ಬೆಳೆಯುತ್ತಿರುವುದನ್ನು ನೋಡಿದ್ದಾಗಿ ಹೇಳಿದರು. ಆ ಶರತ್ಕಾಲದಲ್ಲಿ ಥಿಸಲ್ ಒಂದು ತಂಡದ ನೇತೃತ್ವ ವಹಿಸಿ, ಕಲ್ಲಂಗಡಿಗಳನ್ನು ಕಾಡನ್ನೆಲ್ಲ ಹುಡುಕಿದಳು. ಅದರ ಬೀಜಗಳನ್ನು ಮರಳಿ ತಂದಳು, ಮತ್ತು ಮುಂದಿನ ವಸಂತ ಕಾಲದಲ್ಲಿ ಥಿಸಲ್ ಅವುಗಳನ್ನು ನೆಟ್ಟಿ ಬಳ್ಳಿಯನ್ನು ಬೆಳೆಸಿದಳು. ಆದರೆ ಅವಳನ್ನು ಒಂದು ದಿನ ಗದರಿಸಬೇಕಾಯಿತು.“

"ಈ ಬೀಜಗಳಿಂದ ಬೆಳೆದ ಕಲ್ಲಂಗಡಿಗಳು ಬಹಳ ದೊಡ್ಡದಾಗಿದ್ದವು, ಆದರೆ ಅವುಗಳ ರಸ ಹುಳಿಯಾಗಿತ್ತು. ಥಿಸಲ್ ಹಗಲಿರುಳು ದುಡಿದು, ಕಡಿಮೆ ಹುಳಿಯಾಗಿರುವ ಕಲ್ಲಂಗಡಿಯನ್ನು ಕೊಂಡುಕೊಳ್ಳುವವರೆಗೆ ಎಲ್ಲಾ ಕಲ್ಲಂಗಡಿಗಳ ರುಚಿ ನೋಡುತ್ತಿದ್ದಳು. ಮುಂದಿನ ವರ್ಷ ಅವಳು ಆ ಕಲ್ಲಂಗಡಿಯ ಬೀಜಗಳನ್ನು ನೆಟ್ಟಳು. ಹೊಸ ಹಣ್ಣಿನ ರಸ ಇನ್ನಷ್ಟು ಸಿಹಿಯಾಗಿತ್ತು. ಮತ್ತೆ ಥಿಸಲ್ ಎಲ್ಲಕ್ಕಿಂತ ಸಿಹಿಯಾದ ಕಲ್ಲಂಗಡಿಯನ್ನು ಆರಿಸಿಕೊಂಡು, ಮುಂದಿನ ವರ್ಷ ಆ ಕಲ್ಲಂಗಡಿಯಿಂದ ಬೀಜಗಳನ್ನು ನೆಟ್ಟಳು. ವರ್ಷದಿಂದ ವರ್ಷಕ್ಕೆ ಹೀಗೆ ಮಾಡುತ್ತಲೇ ಇದ್ದಳು; ಕೊನೆಗೆ ಜೇನುತುಪ್ಪದಷ್ಟು ಸಿಹಿಯಾದ ಕಲ್ಲಂಗಡಿಗಳನ್ನು ಪಡೆದಳು."

"ಅವಳನ್ನು ಯಾವುದಕ್ಕಾಗಿ ಗದರಿಸಿದರು?" ಎಂದು ಡನ್ನೋ ಕೇಳಿದನು.

"ಆ ಕಲ್ಲಂಗಡಿಗಳಿಂದ ಏನಾದರೂ ಒಳ್ಳೆಯದು ಆಗುತ್ತದೆ ಎಂದು ಯಾರೂ ನಂಬಲಿಲ್ಲ. ಅದರ ಜೊತೆಗೆ, ಇಡೀ ಪಟ್ಟಣವೇ ಅವುಗಳಿಂದ ತುಂಬಿಹೋಯಿತ್ತು — ಕಲ್ಲಂಗಡಿಗಳಿಂದಾಗಿ ದಾರಿಯಲ್ಲಿ ನಡೆಯುವುದೇ ಕಷ್ಟವಾಯಿತ್ತು. ಅವು ಅನೇಕ ಸಲ ಮನೆಗಳ ಪಕ್ಕದಲ್ಲೇ ಬೆಳೆಯುತ್ತಿದ್ದವು. ಅವು ಚಿಕ್ಕದಾಗಿದ್ದರೆ ಅಷ್ಟೇನೂ ಸಮಸ್ಯೆಯಾಗಿರಲಿಲ್ಲ, ಆದರೆ ದೊಡ್ಡದಾದಾಗ ಗೋಡೆಗಳನ್ನು ಕೆಡವಿಬಿಡುವ ಅಪಾಯವಿತ್ತು. ಒಂದು ಮನೆ ನಿಜವಾಗಿಯೂ ಕಲ್ಲಂಗಡಿಯ ಕಾರಣದಿಂದ ಕುಸಿದುಬಿತ್ತು. ನಮ್ಮ ಕೆಲವು ಮೈಟ್ಸಹುಡುಗಿಯರು ಕಲ್ಲಂಗಡಿಗಳನ್ನು ನೆಡುವುದನ್ನು ನಿಷೇಧಿಸಬೇಕೆಂದು ಬಯಸಿದರು, ಆದರೆ ಇತರರು ಥಿಸಲ್‌ನ ಪರವಾಗಿ ನಿಂತು ಅವಳ ಕೆಲಸದಲ್ಲಿ ಸಹಾಯ ಮಾಡಿದರು."

ಈ ವೇಳೆಗೆ ಅವರು ನದಿಯ ದಂಡೆಗೆ ನಡೆಯುತ್ತ ಬಂದಿದ್ದರು.

"ಇದನ್ನು ಕಲ್ಲಂಗಡಿ ನದಿ ಎಂದು ಕರೆಯುತ್ತಾರೆ," ಎಂದಳು ಸ್ನೋಡ್ರಾಪ್. "ದಡದ ಉದ್ದಕ್ಕೂ ಎಷ್ಟು ಕಲ್ಲಂಗಡಿಗಳು ಬೆಳೆಯುತ್ತಿವೆ ನೋಡಿ."

ಕಾರ್ಪೆಟ್ಟಿನ ಪಟ್ಟಿಯಂತೆ ಕಾಣುತ್ತಿದ್ದ ಒಂದು ಕಿರಿದಾದ ಸೇತುವೆಯನ್ನು ನದಿಯ ಒಂದು ದಡದಿಂದ ಮತ್ತೊಂದು ದಡಕ್ಕೆ ಹಾಸಲಾಗಿತ್ತು. ಅದು ಬಹಳ ದಪ್ಪವಾದ ಮತ್ತು ಬಲವಾದ ವಸ್ತುವಿನಿಂದ ಮಾಡಲ್ಪಟ್ಟಿತ್ತು.

"ನಾವೇ ಈ ಕಾರ್ಪೆಟ್ಟನ್ನು ನೇಯ್ದು ಸೇತುವೆ ಕಟ್ಟಿದ್ದೇವೆ," ಎಂದಳು ಕಾರ್ನ್‌ಫ್ಲವರ್. "ಆ ಕಾರ್ಪೆಟ್ಟನ್ನು ನೇಯಲು ನಮಗೆ ಒಂದು ತಿಂಗಳು ಬೇಕಾಯಿತು, ನಂತರ ಮೈಟ್ಸಹುಡುಗರು ಅದನ್ನು ನದಿಯಾಚೆಗೆ ಎಳೆದು ಹರಡಲು ಸಹಾಯ ಮಾಡಿದರು."

“ಅದು ಬಹಳ ಮೋಜಿನ ವಿಷಯ!” ಎಂದು ಸ್ನೋಡ್ರಾಪ್ ಹೇಳಿದಳು. “ಅವರಲ್ಲಿ ಒಬ್ಬನು ನೀರಿನಲ್ಲಿ ಬಿದ್ದು, ಬಹುತೇಕ ಮುಳುಗಿ ಹೋಗಿದ್ದನು, ಆದರೆ ಯಾರೋ ಅವನನ್ನು ಹೊರಗೆ ಎಳೆದರು.”

ಕಾರ್ನ್‌ಫ್ಲವರ್ ಧೈರ್ಯವಾಗಿ ಸೇತುವೆಯ ಮೇಲೆ ನಡೆದು ಹೋಗಿ ಇನ್ನೊಂದು ಬದಿಗೆ ದಾಟಿದಳು. ಡನ್ನೋ ಕೂಡ ಅಷ್ಟೇ ಧೈರ್ಯದಿಂದ ನಡೆದು ಹೋದನು, ಆದರೆ ಸೇತುವೆ ತೂಗುತ್ತಿರುವುದನ್ನು ಅನುಭವಿಸಿದಾಗ ನಿಂತುಬಿಟ್ಟನು.

“ನೀನು ಯಾಕೆ ನಿಂತುಬಿಟ್ಟೆ?” ಎಂದು ಸ್ನೋಡ್ರಾಪ್ ಕೇಳಿದಳು. “ನಿನಗೆ ಭಯವಾಗಿದೆಯೇ?”

“ಖಂಡಿತ ಇಲ್ಲ. ಇದು ಎಂಥಾ ವಿಚಿತ್ರವಾದ ಸೇತುವೆ ಎಂದು ಯೋಚಿಸುತ್ತಿದ್ದೆ ಅಷ್ಟೇ.”

ಅವನು ಕೆಳಗೆ ಬಾಗಿ, ಸೇತುವೆಯ ಬದಿಗಳನ್ನು ಹಿಡಿದುಕೊಂಡು, ತಾನು ಹೆದರಿಲ್ಲವೆಂದು ತೋರಿಸಲು ನಗುತ್ತಾ ಇದ್ದನು.



ಸ್ನೋಡ್ರಾಪ್ ಅವನ ಒಂದು ಕೈಯನ್ನು ಹಿಡಿದಳು, ಕಾರ್ನ್‌ಫ್ಲವರ್ ಇನ್ನೊಂದು ಕೈಯನ್ನು ಹಿಡಿದಳು, ಮತ್ತು ಇಬ್ಬರೂ ಸೇರಿ ಅವನನ್ನು ಸೇತುವೆಯ ಮೇಲಿಂದ ಕರೆದುಕೊಂಡು ಹೋದರು. ಅವನಿಗೆ ಭಯವಾಗಿತ್ತು ಎಂಬುದನ್ನು ಅವರಿಬ್ಬರೂ ನೋಡಿದ್ದರು, ಆದರೆ ಅವರು ಅವನನ್ನು ನೋಡಿ ನಗಲಿಲ್ಲ, ಏಕೆಂದರೆ ಮೈಟ್ಸ್‌ಹುಡುಗರಿಗೆ ತಮ್ಮನ್ನು ನೋಡಿ ನಗುವುದನ್ನು ಸಹಿಸಲಾಗುವುದಿಲ್ಲ ಎಂಬುದು ಅವರಿಗೆ ತಿಳಿದಿತ್ತು.

ಇನ್ನೊಂದು ಬದಿಯನ್ನು ತಲುಪಿದ ನಂತರ, ಅವರು ಬೀದಿಯಲ್ಲಿ ಮುಂದುವರಿದು, ಹಸಿರು ಛಪ್ಪರವಿದ್ದ ಬಿಳಿ ಮನೆಯ ಮುಂದೆ ಬಂದರು.

“ಇದು ನಮ್ಮ ಆಸ್ಪತ್ರೆ,” ಎಂದು ಕಾರ್ನ್‌ಫ್ಲವರ್ ಹೇಳಿದಳು.



Н. Носов

ПУТЕШЕСТВИЕ ПО ГОРОДУ

На языке бенгали

Nikolai Nosov

A WALK ABOUT TOWN

In Bengali

শিশুদের জন্য





30 к.

